SRUJANI ISSN: 2583-3510
Indian Journal of Innovative Research and Development (SIJIRD)
Volume-1 (02), May-June 2022, Pp. 24-27
Bi-Monthly, Peer-Reviewed, Open Access, Indexed Journal
editor@srujani.in
www.srujani.in

# ಅರಣ್ಯದಂಚಿನ ಗ್ರಾಮಗಳಲ್ಲಿ ನೆಲೆಸಿರುವ ಹೊಲೆಯ ಸಮುದಾಯದ ಸ್ಥಿತಿಗತಿಗಳು

**ರಾಜೇಂದ್ರ ಕುಮಾರ್*** **ಮತ್ತು ಪ್ರೊ. ಚಲುವರಾಜು****
*ಸಂಶೋಧನಾರ್ಥಿ; **ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

***Abstract:***
ಭಾರತದ ಸಾಮಾಜಿಕ ವ್ಯವಸ್ಥೆಯು ಅಸಮಾನತೆಯಿಂದ ಕೂಡಿದೆ. ಜಾತಿಯು ಮೇಲ್ವರ್ಗಗಳ ಹರಿತವಾದ ಆಯುಧವಾಗಿದ್ದು, ಇಂದಿಗೂ ಕೂಡ ಅನೇಕ ಜಾತಿಗಳು ಸಮಾಜದ ಮುಖ್ಯವಾಹಿನಿಯಡೆಗೆ ಬರಲು ಸಾಧ್ಯವಾಗಿಲ್ಲ. ಅದರಲ್ಲೂ ವರ್ಣವ್ಯವಸ್ಥೆಯಿಂದ ಹೊರಗಿರುವ ಅಸ್ಪೃಶ್ಯರು ಇಂದಿಗೂ ಅನೇಕ ಸಮಸ್ಯೆಗಳಿಂದ ನರಳುತ್ತಿದ್ದಾರೆ. ಅಂತಹ ಸಮುದಾಯಗಳಲ್ಲಿ ಹೊಲೆಯ (ಛಲವಾದಿ) ಸಮುದಾಯವು ಕೂಡ ಒಂದಾಗಿದೆ. ಪ್ರಸ್ತುತ ಲೇಖನದಲ್ಲಿ ಅರಣ್ಯದಂಚಿನ ಗ್ರಾಮಗಳಲ್ಲಿ ನೆಲೆಸಿರುವ ಹೊಲೆಯ ಸಮುದಾಯದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿಗಳನ್ನು ವಿಶ್ಲೇಷಿಸಲಾಗಿದೆ.

***Key Words:*** ಅರಣ್ಯದಂಚು, ಅಸ್ಪೃಶ್ಯರು, ಛಲವಾದಿ, ಪರಿಶಿಷ್ಟ ಜಾತಿ, ಹೊಲೆಯ.

## ಪೀಠಿಕೆ

ಕರ್ನಾಟಕದಲ್ಲಿ ಸಂವಿಧಾನದನ್ವಯ ಹೊಲೆಯ (ಛಲವಾದಿ) ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರಿಸಲಾಗಿದೆ. ಅನುಸೂಚಿತ ಜಾತಿಗಳ ಪಟ್ಟಿಯಲ್ಲಿ ಹೊಲೆಯ ಸಮುದಾಯದವರ ಸಂಖ್ಯೆ ದೊಡ್ಡದು. ಒಂದಾನೊಂದು ಕಾಲದಲ್ಲಿ ಭೂಮಿಯ ಒಡೆಯರಾಗಿದ್ದ ಇವರು ಪ್ರಸ್ತುತ ದಿನಗಳಲ್ಲಿ ಭೂರಹಿತ ಕೃಷಿಕಾರ್ಮಿಕರಾಗಿದ್ದಾರೆ. ಆರ್ಥಿಕ ಚಟುವಟಿಕೆಗಳನ್ನು ನಿಯಂತ್ರಿಸುವಂತಹ ವಲಯಗಳಾದ ಮಾರುಕಟ್ಟೆ, ಬ್ಯಾಂಕಿಂಗ್ ಹಾಗೂ ಸೇವಾವಲಯಗಳಲ್ಲಿ ಈ ಸಮುದಾಯದ ಪ್ರತಿನಿಧೀಕರಣ ಅತ್ಯಂತ ವಿರಳ, ಹೀಗಾಗಿ ಕಡುಬಡತನವೇ ಇವರೆಲ್ಲರ ನಿತ್ಯದ ಉಸಿರಾಗಿದ್ದು, ಇವರಲ್ಲಿನ ಇಚ್ಛಾಶಕ್ತಿ ಮತ್ತು ಸಂಘಟನೆಯ ಕೊರತೆಯೇ ಮುಖ್ಯ ಕಾರಣವಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಮೈಸೂರು ಜಿಲ್ಲೆಯ ಬಂಡೀಪುರ ರಾಷ್ಟ್ರೀಯ ಅಭಯಾರಣ್ಯ ಮತ್ತು ನಾಗರಹೊಳೆ ರಾಷ್ಟ್ರೀಯ ಅಭಯಾರಣ್ಯದ ವ್ಯಾಪ್ತಿಯಲ್ಲಿ ಬರುವ ಅರಣ್ಯದಂಚಿನ ಗ್ರಾಮಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಕಾಡಂಚಿನಲ್ಲಿರುವ ಹೊಲೆಯ ಸಮುದಾಯದ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಜೀವನ ಮಾಡುವುದು ಅಧ್ಯಯನದ ಉದ್ದೇಶವಾಗಿದ್ದು, ಪ್ರಸ್ತುತ ಅಧ್ಯಯನಕ್ಕೆ ಪ್ರಾಥಮಿಕ ಮತ್ತು ಮಾಧ್ಯಮಿಕ ಮೂಲಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಸಂದರ್ಶನ, ಪ್ರಕರಣ, ಕುಟುಂಬ ಸಮೀಕ್ಷೆ, ಅವಲೋಕನ ಮುಂತಾದ ವಿಧಾನಗಳನ್ನು ಬಳಸಿ ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

## ಹೊಲೆಯ (ಛಲವಾದಿ) ಸಮುದಾಯದ ಹಿನ್ನೆಲೆ

ಕರ್ನಾಟಕದ ಛಲವಾದಿ ಸಮುದಾಯದ ಬಗೆಗೆ ವಿದ್ವಾಂಸರೆಲ್ಲ ಹೊಲೆಯ ಹೆಸರಿನ ಮೂಲ ಶೋಧಿಸುವ ಮೂಲಕ ಜಾತಿಯ ಪ್ರಾಚೀನತೆ ಮತ್ತು ಅರ್ಥವನ್ನು ಸೂಚಿಸಲು ಪ್ರಯತ್ನಿಸಿರುವರು. ಈ ಹಿನ್ನೆಲೆಯಲ್ಲಿ ಛಲವಾದಿ ಸಮುದಾಯದ ರಾಜಪ್ರಭುತ್ವದ ಕಾಲದಿಂದಲೂ ಆಡಳಿತದೊಂದಿಗೆ ಗುರುತಿಸಿಕೊಂಡು ಬಂದಿದೆ. ರಾಜ್ಯ ರಕ್ಷಿಸುವ ಸೈನಿಕರಿಗೆ ಮುನ್ನೆಚ್ಚರಿಕೆ ನೀಡುವ ಕೆಲಸ ಈ ಸಮುದಾಯದವರಾಗಿತ್ತು. ಹೊಲೆಯ ಸಮುದಾಯದವರನ್ನು ಛಲವಾದಿ, ಆದಿಕರ್ನಾಟಕ, ಬಲಗೈ ಮುಂತಾದ ಹೆಸರುಗಳಿಂದ ಗುರುತಿಸಲಾಗುತ್ತದೆ. ಇದಲ್ಲದೆ ಅಂತ್ಯಜ,

*Please cite this article as:* ರಾಜೇಂದ್ರ ಕುಮಾರ್ ಮತ್ತು ಚಲುವರಾಜು. (2022). ಅರಣ್ಯದಂಚಿನ ಗ್ರಾಮಗಳಲ್ಲಿ ನೆಲೆಸಿರುವ ಹೊಲೆಯ ಸಮುದಾಯದ ಸ್ಥಿತಿಗತಿಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(2), 24–27.

ಪಂಚಮ, ಪರೆಯರು, ಪಲ್ಲವರು, ಚಕ್ಕಲಿಯನ್ನರು, ತಿಯರು, ಮಹಾರ್ ಮಾಂಗ್, ಮಾಲ, ಮಾದಿಗ, ಆದಿದ್ರಾವಿಡ, ಆದಿ ಆಂಧ್ರ, ಆದಿ ಕರ್ನಾಟಕ, ಪರಿಶಿಷ್ಟ ಜಾತಿ, ಅನೂಸೂಚಿತ ಜಾತಿ ಮುಂತಾದ ಹೆಸರುಗಳಿಂದ ಕರೆಯುತ್ತಾರೆ.

ಮೊದಲಿಗೆ ಛಲವಾದಿ ಎಂಬ ಪದದ ಅರ್ಥವನ್ನು ನೋಡುವುದಾದರೆ ಛಲವಾದಿ ಎಂಬ ಪದಕ್ಕೆ ಹಿಂಜರಿಯದ, ಪಟ್ಟು ಹಿಡಿದ ಮಂಡುತನದ ಮಾತುಗಾರಿಕೆಯನ್ನು ಉಳ್ಳವರು ಎಂಬ ಅರ್ಥವಿದೆ. ಛಲವಾದಿ ಎಂದರೆ ದೃಡಸಂಕಲ್ಪ ಹೊಂದಿರುವ ಮತ್ತು ನಿಷ್ಠೆಯಿಂದ ಜೀವನ ನಡೆಸುವ ಸ್ವಾಭಿಮಾನಿ ವ್ಯಕ್ತಿಗಳಾಗಿದ್ದಾರೆ. ಇವರು ನಿಷ್ಠಯಿಂದ ಶಿವನ ಸೇವೆ ಮಾಡುವ ಮತ್ತು ಬಿಕ್ಷೆ ಬೇಡಿ ಬದುಕುವ ಜನರಾಗಿದ್ದು ಲಿಂಗವಂತರರಿಂದ ಬಹುವಾಗಿ ಗೌರವಿಸಲ್ಪಡುವ ಒಬ್ಬ ಛಲವಾದಿ ಎಂದು ಕಿಟಲ್ ಚರ್ಚಿಸಿದ್ದಾರೆ. ವಾದ್ಯಗಳನ್ನು ಛಲದಿಂದ ವಾದನ ಮಾಡುತ್ತಿದ್ದರಿಂದ ಛಲವಾದಿ ಎಂಬ ಹೆಸರು ಬಂದಿರಬಹುದು. ಛಲವಾದಿ ನಾಮಪದವಾಗಿದೆ ಛಲವನ್ನು ಹಿಡಿದವನು, ಧೃಢ ಸಂಕಲ್ಪವುಳ್ಳವನು, ಕಡುಚಾಗಿ ಮತ್ತು ಛಲವಾದಿ ಪದಗಳನ್ನು ಕೇಶಿರಾಜನ ಶಬ್ದಮಣಿ ದರ್ಪಣದಲ್ಲಿ ಬಳಕೆಯಾಗಿದೆ ಕ್ರಿ.ಶ 1530ರ ಶಾಸನದಲ್ಲಿ "ಸುಂಕತಳವಾರ, ಅನುಪಮಗೇಶಾ, ಛಲವಾದಿ ಸಂಗಡ, ಪಾತಂಗಾರರಿಗೂ ಇದೇ ಭಾಷೆಯೆಂದು ಛಳಿಗಂಡವೋಲು ಮೂರ್ಛೆ ಗೈವಧಿಸಿಡಿಲೆ ಛಲವಾದಿ ಚೆಂದವಿಡನ್ನೆ" ಎಂದು ಚಿಕ್ಕೋಪಾಧ್ಯಾಯ ತನ ಶತಕ ಸಾಹಿತ್ಯದಲ್ಲಿ ಛಲವಾದಿ ಪದ ಬಳಸಿದ್ದಾನೆ.

ಆದಿ ಕರ್ನಾಟಕ ಎನ್ನುವ ಪರ್ಯಾಯ ಜಾತಿ ಸೂಚಕ ಹೆಸರು 1925 ರಲ್ಲಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಆಡಳಿತಾತ್ಮಕ ಹಂತದಲ್ಲಿ ಚಾಲ್ತಿಗೆ ತಂದ ಹೆಸರಾಗಿದೆ. ಆದರೂ ಆದಿ ಕರ್ನಾಟಕ ಎನ್ನುವುದು ಆ ಜನ ಸಮುದಾಯದ ಪ್ರಾಚೀನತೆಯನ್ನು ಧ್ವನಿ ಪೂರ್ಣವಾಗಿ ಸೂಚಿಸುವಂತೆಯೇ ಇದೆ. ಥರ್‌ಸ್ಟನ್ ರವರು ಸೂಚಿಸಿರುವ ಮತ್ತೊಂದು ನಿಷ್ಪತ್ತಿ ಹೊಲ ಭೂಮಿ ಮಣ್ಣು ಎಂಬ ಅರ್ಥನೀಡುತ್ತಾರೆ ಎಡ್ಗರ್ ಥರ್‌ಸ್ಟನ್ ಹೊಲದೊಡೆಯರೇ ಹೊಲೆಯರು ಎಂದು ತಿಳಿಸಿದ್ದಾರೆ. ಅವರು ದಿ ಕ್ಯಾಸ್ಟ್ ಅಂಡ್ ಟ್ರೈಬ್ ಆಫ್ ಸದರನ್ ಇಂಡಿಯಾ ಎಂಬ ಪುಸ್ತಕದಲ್ಲಿ ಹೊಲೆಯ ಎಂಬ ಪದದ ಉತ್ಪತ್ತಿ ಭೂಮಿಯ ಒಡೆಯ, ರಾಜ್ಯದ ಒಡೆಯ ಎಂಬ ಅರ್ಥದಲ್ಲಿ ಹೊಲದೊಡೆಯರೇ ಹೊಲೆಯರು ಎಂದು ತಿಳಿಸಿದ್ದಾರೆ.

ಹೊಲೆಯ ಸಮುದಾಯದ ಸಾಮಾಜಿಕ ಅಂಶಗಳು

ಹೊಲೆಯ ಅಥವ ಛಲವಾದಿ ಸಮುದಾಯದ ಸಾಮಾಜಿಕ ಅಂಶಗಳನ್ನು ಗಮನಿಸಿದಾಗ ಅವರ ಜೀವನ ಮಟ್ಟವು ಅತ್ಯಂತ ಕೆಳಮಟ್ಟದೆ. ಬಡತನ ಮತ್ತು ಅನಕ್ಷರತೆಯಿಂದ ಬಳಲುತ್ತಿರುವ ಈ ಸಮುದಾಯವು ಅನೇಕ ಮೂಢನಂಬಿಕೆ, ಧಾರ್ಮಿಕ ಆಚರಣೆ ಮತ್ತು ದುಶ್ಚಟಗಳಿಂದಾಗಿ ದುಡಿದ ಬಹುತೇಕ ಹಣ ವ್ಯಯವಾಗುತ್ತದೆ. ಈ ಸಮುದಾಯದ ಜೀವನಕ್ರಮ ನಂಬಿಕೆ, ಸಂಪ್ರದಾಯ, ಮೂಡನಂಬಿಕೆ, ಸಂಬಂಧಗಳು ಇತ್ಯಾದಿಗಳೆಲ್ಲವನ್ನು ಅವಲೋಕಿಸಿದಾಗ ಇತಿಹಾಸ ಪೂರ್ವದಿಂದಲೂ ವರ್ಗರಹಿತ ಸಮಾಜಕ್ಕೆ ತುಂಬಾ ತೀರವಾಗಿ ಕಾಣುತ್ತದೆ.

**ಹೊಲೆಯ (ಛಲವಾದಿ) ಸಮುದಾಯದ ಮಕ್ಕಳ ಸ್ಥಿತಿಗತಿ**

ಶಾಲಾ ಶಿಕ್ಷಣವನ್ನು ಸಾರ್ವತ್ರಿಕ ಉಚಿತ ಮತ್ತು ಕಡ್ಡಾಯವಾಗಿ 6–14 ವಯೋಮಾನದ ಎಲ್ಲಾ ಮಕ್ಕಳಿಗೂ ನೀಡಬೇಕು ಎನ್ನುವ ಬೇಡಿಕೆ ನಮ್ಮ ಸಂವಿಧಾನದ ಆಶಯವಾಗಿದೆ. ಜುಲೈ 14, 1964 ರಲ್ಲಿ ಕೋಠಾರಿಯವರ ಅಧ್ಯಕ್ಷತೆಯಲ್ಲಿ ರಚನೆಗೊಂಡ ಶಿಕ್ಷಣ ಆಯೋಗದ ವರದಿ ಹಿನ್ನೆಲೆಯಲ್ಲಿ 1968ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ರೂಪಿಸಿ ಜಾರಿಗೊಳಿಸಲಾಯಿತು. ಸಂವಿಧಾನ ಪರಿಚ್ಛೇದ 21 ಜೀವಿಸುವ ಹಕ್ಕಿನ ಜೊತೆಗೆ ಶಿಕ್ಷಣ ಪಡೆಯುವುದು ಮೂಲಭೂತ ಹಕ್ಕೆಂದು ಹೇಳುವ 21ಎ ಪರಿಚ್ಛೇದವನ್ನು ಸೇರಿಸಲಾಗಿದೆ. 6–14 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಶಾಲಾ ಕಲಿಕೆಗೆ ಅವಕಾಶವನ್ನು ಪೊಷಕರು ಒದಗಿಸಬೇಕೆಂದು ತಿಳಿಸಲಾಗಿದೆ.

ಕರ್ನಾಟಕದಲ್ಲಿ ದಲಿತರು ಇತರೆ ಜಾತಿಯವರಿಗೆ ಹೋಲಿಸಿದರೆ ಆರ್ಥಿಕವಾಗಿ ಬಹಳ ದುರ್ಬಲರಾಗಿದ್ದಾರೆ. 2003–2004ನೇ ಸಾಲಿನಲ್ಲಿ ಇತರೆ ಜಾತಿಗಳ ಶೇ21.30ಕ್ಕೆ ಹೋಲಿಸಿದರೆ ಶೇ 49ರಷ್ಟು ಗ್ರಾಮೀಣ ಪ್ರದೇಶದ ದಲಿತ ಕುಟುಂಬಗಳು ಅಧೀಕೃತ ಬಡತನ ರೇಖೆಗಿಂತ ಕೆಳಗಿದ್ದಾರೆ. ಇಂದಿಗೂ ಕೂಡ ಹಳ್ಳಿಗಳಲ್ಲಿ ದಲಿತರು ಆರ್ಥಿಕವಾಗಿ ಸಾಮಾಜಿಕವಾಗಿ ರಾಜಕೀಯವಾಗಿ ಅತ್ಯಂತ ಕೆಳಮಟ್ಟದಲಿದ್ದು ಬಹುಸಂಖ್ಯಾತ ದಲಿತ ಕುಟುಂಬಗಳು ಅತಿಕಡಿಮೆ ಅಥವಾ ಭೂಮಿಯನ್ನು ಹೊಂದಿಲ್ಲವಾದ್ದರಿಂದ ಪ್ರಬಲ ಹಾಗೂ ಇತರೆ ಪರಿಶಿಷ್ಟ ಜಾತಿಯ ಜನರಿಗಿಂತ ತುಂಬಾ ನಿಕೃಷ್ಟವಾದ ಸಾಮಾಜಿಕ ಸ್ಥಾನವನ್ನು ಹೊಂದಿದ್ದಾರೆ.

ಕಾಡನ್ನು ಅವಲಂಬಿಸಿ ಕಾಡಂಚಿನಲ್ಲಿ ಬದುಕುತ್ತಿರುವ ಹೊಲೆಯ ಸಮುದಾಯದವರಿಗೆ ಕೂಲಿಯೇ ಆದಾಯದ ಪ್ರಮುಖ ಮೂಲವಾಗಿದೆ. ಇವರು ಇತರ ಸಮುದಾಯದವರ ಜಮೀನಿನಲ್ಲಿ ಕೂಲಿನಾಲಿ ಮಾಡಿ ಜೀವನ ಸಾಗಿಸುವುದರ ಜೊತೆಗೆ ಸಣ್ಣ ಮತ್ತು ಅತಿಸಣ್ಣ ಹಿಡುವಳಿಯಲ್ಲಿ ಅಲ್ಪ ಪ್ರಮಾಣದಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಇಂದಿನ ದಿನಗಳಲ್ಲಿ ಕಾಡಂಚಿನ ಆದಿಕರ್ನಾಟಕ ಸಮುದಾಯಕ್ಕೆ ಸೇರಿದ ಮಕ್ಕಳು ಈಗೀಗ ಶಿಕ್ಷಣದ ಕಡೆ ಮುಖಮಾಡಿದ್ದಾರೆ. ಇದು ಏಕಮುಖವಾದಾಗ

ಹೆಚ್ಚು ಪ್ರಯೋಜನವಾಗಲಾರದು ನಾವು ಇತರರಂತೆ ಅಭಿವೃದ್ಧಿ ಹೊಂದಬೇಕು ಅದಕ್ಕಾಗಿ ಶಿಕ್ಷಣ ಪಡೆಯಬೇಕು ಎಂಬ ಆಸಕ್ತಿ ಅವರಲ್ಲಿ ಮೂಡಿದಾಗ ಮಾತ್ರ ಒಂದು ಸಮುದಾಯದ ಏಳಿಗೆ ಸಾಧ್ಯ. ಪ್ರಸ್ತುತ ಕಾಡಂಚಿನ ಹೊಲೆಯರನ್ನು ಕುರಿತು ಹೇಳುವುದಾದರೆ ಹೊಲೆಯರ ಸಮುದಾಯದ ಶಿಕ್ಷಣವು ಹಿಂದೆ ಬಹಳ ಶೋಚನೀಯವಾಗಿತ್ತು. ಅಂದರೆ ಸಂಪ್ರದಾಯಕ್ಕೆ ಒಳಗಾದ ಜನರು ಅದರಲ್ಲೂ ಹೆಣ್ಣು ಮಕ್ಕಳನ್ನು ತಮ್ಮ ಊರಿನಲ್ಲಿರುವ ಶಾಲೆಗೆ ಕಳುಹಿಸುತ್ತಿದ್ದಾರೆಯೇ ಹೊರತು ಮುಂದಿನ ಶಿಕ್ಷಣಕ್ಕೆ ಕಳುಹಿಸುತ್ತಿರಲಿಲ್ಲ. ಅಂದರೆ ಎಷ್ಟು ಓದಿದರು ಹೆಣ್ಣು ಮಕ್ಕಳು ಇನ್ನೊಬ್ಬರ ಮನೆಯ ಜೀತದಾಳುಗಳಂತೆ ಕೆಲಸ ನಿರ್ವಹಿಸಬೇಕೆ ಹೊರತು ಅದರಿಂದ ಬೇರೇನು ಆಗುವುದಿಲ್ಲ ಎಂಬ ನಂಬಿಕೆ ಈ ಸಮುದಾಯಗಳಲ್ಲಿದೆ. ಆದರೆ ಪ್ರಸ್ತುತ ದಿನಗಳಲ್ಲಿ ಶಿಕ್ಷಣದ ಮಹತ್ವ ಅರಿತ ಹಿರಿಯರು ಗಂಡುಮಕ್ಕಳ ಜೊತೆಗೆ ಹೆಣ್ಣುಮಕ್ಕಳಿಗೂ ಸಮನಾದ ಶಿಕ್ಷಣವನ್ನು ಕೊಡಿಸುತ್ತಿದ್ದಾರೆ. ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ಪಡೆದುಕೊಂಡು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಮಹತ್ವ ನೀಡುತ್ತಿರುವುದು ಇತ್ತೀಚಿನ ದಿನಗಳಲ್ಲಿ ಈಗಿನ ಪೀಳಿಗೆಯ ಮಕ್ಕಳಿಗೆ ಶಿಕ್ಷಣ ಕೊಡಿಸಲು ಹಿರಿಯರಲ್ಲಿ ಆಸಕ್ತಿ ಇರುವುದು ಕಾಣಬರುತ್ತಿದೆ.

**ಹೊಲೆಯ ಸಮುದಾಯದ ಆರ್ಥಿಕ ಸ್ಥಿತಿಗತಿ**

ಒಂದು ಸಮುದಾಯವು ನಿರ್ವಹಿಸುವ ಕಸುಬು ಅದರ ಆರ್ಥಿಕ, ಸಾಮಾಜಿಕ, ಮತ್ತು ಇತರೆ ಸಂಗತಿಗಳನ್ನು ತಿಳಿದುಕೊಳ್ಳಲು ಪೂರಕವಾದುದು ಈ ನೆಲದ ಮೂಲ ನಿವಾಸಿಗಳಾದ ಹೊಲೆಯ ಸಮುದಾಯದ ಲಕ್ಷಾಂತರ ಕುಟುಂಬಗಳೆ ಸ್ವಂತ ಭೂಮಿಯಿಲ್ಲದೆ ಅನ್ಯರ ಬಳಿ ಕೂಲಿ ಮಾಡಿ ಬದುಕಬೇಕಾದ ಪರಿಸ್ಥಿತಿ ಇಂದಿಗೂ ತಪ್ಪಿಲ್ಲ. ಕಾಡನ್ನು ಆಶ್ರಯಿಸಿ ಬದುಕುವುದು ಇವರಿಗೆ ಅನಿವಾರ್ಯವಾಗಿತ್ತು ಸೌದೆ ಸಂಗ್ರಹಿಸಿ ಮಾರಾಟ ಮಾಡುವುದು ಕಾಡಿನ ಉತ್ಪನ್ನಗಳನ್ನು ಸಂಗ್ರಹಿಸಿ ಮಾರಾಟ ಮಾಡುವುದು ಇದರ ಜೊತೆಗೆ ಬೆತ್ತ ಮತ್ತು ಬಿದರಿನಿಂದ ವಿವಿಧ ವಸ್ತುಗಳನ್ನು ಸಿದ್ದಪಡಿಸಿ ಮಾರಾಟ ಮಾಡುವುದು ಇಂತಹ ಉಪಕಸುಬುಗಳ ಮೂಲಕ ಜೀವನ ನಿರ್ವಹಣೆ ಮಾಡುತ್ತಿದ್ದರು.

ದಲಿತರನ್ನು ಅವರು ಮಾಡುವ ದುಡಿಮೆಯ ನೆಲೆಯಲ್ಲಿಟ್ಟು ವ್ಯಾಖ್ಯಾನಿಸುವುದೆಂದರೆ. ಈ ನೆಲೆಯಲ್ಲಿ ದಲಿತರೆಂದರೆ ದುಡಿಯುವ ವರ್ಗ, ಶ್ರಮಜೀವಿ ವರ್ಗ, ಕಾರ್ಮಿಕ ವರ್ಗ, ಸಮಾಜದ ಎಲ್ಲಾ ಬಗೆಯ ತಳಮಟ್ಟದ ಕೆಲಸಗಳನ್ನು ದಲಿತರು ಮಾಡುತ್ತಾರೆ ಅಥವಾ ದಲಿತರಿಂದ ಒತ್ತಾಯಪೂರ್ವಕವಾಗಿ ಮಾಡಿಸಲಾಗುತ್ತದೆ. ಶ್ರಮ ಮೌಲ್ಯ ಶೋಷಣೆಗೆ ಒಳಗಾಗಿರುವ ವಿಶಾಲವಾದ ಜನಸ್ತೋಮದವರು ದಲಿತರೇ ಆಗಿದ್ದಾರೆ. ಇಂಡಿಯಾದಲ್ಲಿ ದಲಿತರು ಪ್ರಧಾನ ಉತ್ಪಾದಕ ಶಕ್ತಿಗಳು, ಉತ್ಪಾದನೆ ಮಾಡುವ ದೈಹಿಕ ಶಕ್ತಿ ಮತ್ತು ಕೌಶಲ್ಯ ಇವರಲ್ಲಿದೆ. ಹೆಸರಿಗೆ ಮಾತ್ರ ಭೂಮಿಯ ಒಡೆಯರು ಆದರೆ ಉತ್ಪಾದನೆಗೆ ಬಳಸುವ ಭೂಮಿ, ಬಂಡವಾಳ, ಉತ್ಪಾದನೆಯ ಸಾಧನ ಸಲಕರಣೆಗಳು ಇವರಲಿಲ್ಲ. ಇದಕ್ಕೆ ದಲಿತರು ಒಡೆಯರಾಗಿಲ್ಲ. ಹೀಗೆ ಇವರು ಒಡೆತನದಿಂದ ವಂಚಿತರಾಗಿರುವುದರಿಂದ ದಲಿತರಾಗಿದ್ದಾರೆ.

ದಲಿತರು ಮಾಡುವ ಪ್ರಧಾನ ದುಡಿಮೆ ಎಂದರೆ ಕೃಷಿ ಭೂಮಿಯಲ್ಲಿ ದುಡಿಯುವುದು. ಹಾಗಾಗಿ ದಲಿತರನ್ನು ಅವರು ಮಾಡುವ ಕೆಲಸದ ಆಧಾರದಲ್ಲಿ ಗುರುತಿಸಿ ಅವರನ್ನು ಕೃಷಿಕೂಲಿ ಕಾರ್ಮಿಕರು ಎಂದು ಕರೆಯಬೇಕು. ದಲಿತರಲ್ಲಿ ಕೃಷಿಕೂಲಿ ಕಾರ್ಮಿಕರ ಸಂಖ್ಯೆಯೇ ಪ್ರಧಾನವಾದುದು, ಮುಖ್ಯವಾದುದು. ಉಳಿದಂತೆ ಕುಶಲಕರ್ಮಿ, ಗುಡಿಕೈಗಾರಿಕೆ, ಸಣ್ಣಪುಟ್ಟ ನೌಕರಿ. ಅರೆ ನೌಕರಿ ಇತ್ಯಾದಿ ಕೆಲಸ ಮಾಡುವವರೂ ಇದ್ದಾರೆ.

**ಉಪಸಂಹಾರ**

ಆದಿ ಕರ್ನಾಟಕರು, ಹೊಲೆಯರು ಛಲವಾದಿ ಎಂಬ ಹೆಸರಿನಿಂದ ಕರೆಯಲ್ಪಡುವ ಈ ನೆಲದ ಮೂಲ ನಿವಾಸಿಗಳು. ದ್ರಾವಿಡ ಮತ್ತು ಆರ್ಯ ಪೂರ್ವ ಯುಗಗಳಿಂದಲೂ ಸ್ಥಿರವಾಗಿ ನೆಲೆನಿಂತ ಜನ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರೆಂಬ ಈ ನಾಲ್ಕು ವರ್ಣಗಳಿಗೂ ಒಳಪಡದ ಪಂಚಮರೆಂಬ ಐದನೇ ವರ್ಗವೇ ಈ ಅಸ್ಪೃಶ್ಯ ಹೊಲೆಯರು ಎಂಬುದು ಸಂಶೋಧನೆಗಳು ಗ್ರಹಿಸಿದ ಅಂಶ ಮೂರು ಪ್ರಮುಖ ವರ್ಗಗಳಲ್ಲದೆ ನಾಲ್ಕನೇ ಶೂದ್ರವರ್ಗದವರಿಂದಲೂ ಈ ಹೊಲೆಯರು ಅಸ್ಪೃಶ್ಯತೆಗೆ ಒಳಗಾದವರು ಹೊಲೆಯ ಎಂಬ ಪದ ಭೂಮಿಯ ಒಡೆಯ ಎಂಬ ಅರ್ಥವನ್ನು ನೀಡಿದ್ದು ಭೂಮಿಯಲ್ಲಿ ಬೆಳೆಯನ್ನು ಬೆಳದು ಆ ಬೆಳೆ ಮನ ಮಂದಿಗೆಲ್ಲಾ ಸಾಕಾಗಲಿ ಎಂದು ಪೂಜೆ ಮಾಡಿ ಹುಲಸು(ಸಂವೃದ್ದಿಯಿಂದ ಜೀವನ ನಡೆಸಿದ್ದ ಜನ) ಮೆಲ್ವರ್ಗದ ದಬ್ಬಾಳಿಕೆಗೆ ಒಳಗಾಗಿ ಹೊಲೆಯ ಎಂದರೆ ಹೊಲಸು ತಿನ್ನುವವ ಎಂದು ಬಿಂಬಿಸುವಂತೆ ಮಾಡಿದರು ಹೀಗೆ ಕಾಲ ಕ್ರಮೇಣ ಭೂಮಿಯ ಒಡೆಯರಾಗಿದ್ದ ಹೊಲೆಯರು ಭೂಮಿಯನ್ನು ಕಳೆದುಕೊಂಡು ಕೃಷಿಯಲ್ಲಿ ಕೂಲಿ ಆಳುಗಳಾಗಿ ದುಡಿಯುವುದು, ಊರಿನ ಹಿರಿಯ ಅಥವಾ ಪಟೇಲರ ಮನೆಯಲ್ಲಿ ವ್ಯವಸಾಯದ ಕೂಲಿಯಾಳುಗಳಾಗಿ ಮಾರ್ಪಟ್ಟರು ಆದರೆ ಇತ್ತೀಚಿನ ದಿನಗಳಲ್ಲಿ ಈ ಸಮುದಾಯದ ಕೆಲ ಗಂಡಸರು ಮತ್ತು ಹೆಂಗಸರು ವ್ಯವಸಾಯದಲ್ಲಿ ಹಾಗೂ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರಿಗೆ ಆಧುನಿಕ ವೈದ್ಯಕೀಯ ಹಾಗೂ ಕುಟುಂಬ ಕಲ್ಯಾಣ ಯೋಜನೆಯ ಬಗ್ಗೆ ಒಲವಿದೆ. ಆಧುನಿಕ ಶಿಕ್ಷಣ ವ್ಯವಸ್ಥೆ, ಸರ್ಕಾರದ ಅಭಿವೃದ್ದಿ ಕಾರ್ಯಕ್ರಮಗಳು,

ಸಂಪರ್ಕಸಾಧನಗಳ ಬಳಕೆ, ಇತ್ಯಾದಿ ಆಧುನಿಕ ವ್ಯವಸ್ಥೆಗಳ ಉಪಯೋಗವನ್ನು ಪಡೆದುಕೊಂಡು ನಿಧಾನಗತಿಯಲ್ಲಿ ಸಾಮಾಜಿಕ ಬದಲಾವಣೆಯನ್ನು ಈ ಸಮುದಾಯದ ಜನರು ಹೊಂದುತ್ತಿದ್ದಾರೆ ಇವರಲ್ಲಿ ಕೆಲವು ಕುಟುಂಬಗಳನ್ನು ಬಿಟ್ಟರೆ ಹೆಚ್ಚಿನ ಜನರ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ಹೆಗಡೆ ಆರ್‌ಪಿ (ಅನು.) *ದಲಿತ ಸಮಾಜದ ಇಂದಿನ ಸಾವಾಲುಗಳು.* ಲಡಾಯಿ ಪ್ರಕಾಶನ. ಪು.ಸಂ.61–70
- ಮೊಗಳ್ಳಿ ಗಣೇಶ. *ದಲಿತ ಚಿಂತನೆ.* ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ.
- ಪೂರ್ವಚಾರ್ ಎಂ. (2014). *ಸಾಮಾಜಿಕ ನ್ಯಾಯ ಮತ್ತು ಹಿಂದುಳಿದ ವರ್ಗಗಳ ಸಬಲೀಕರಣ.* ಅನ್ನಪೂರ್ಣ ಪ್ರಕಾಶನ.
- ಪ್ರಶಾಂತ್ ಎಚ್. ಡಿ. *ದಲಿತ ಮಕ್ಕತ ಸ್ಥಿತಿಗತಿ.* ಪ್ರಸಾರಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ.
- ಶೈಲಜ ಕೆ. (2016). *ಪರಿಶಿಷ್ಟ ಜಾತಿ ಮಹಿಳಾ ಕೃಷಿಕಾರ್ಮಿಕರ ಸ್ಥಿತಿಗತಿಗಳು: ಒಂದು ಮಾನವಶಾಸ್ತ್ರೀಯ ಅಧ್ಯಯನ.* ಅಪ್ರಕಟಿತ ಪ್ರೌಢಪ್ರಬಂಧ, ಮೈಸೂರು ವಿಶ್ವವಿದ್ಯಾಲಯ.
- ವೆಂಕಟಸ್ವಾಮಿ ಎಂ. (2003) *ಅಸ್ಪೃಶ್ಯರು ಒಂದು ಪರಿಶೀಲನೆ.* ನವ ಕರ್ನಾಟಕಪಬ್ಲಿಕೇಶನ್ಸ್ ಪ್ರೈ. ಲಿ.